**O.S.No.166/2015 PW.1**

ದಿಃ **26-05-2022** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಎಸ್.ಬಿ., ವಕೀಲರವರಿಂದಃ

**06.** ನನ್ನ ತಂದೆ ಮೃತ ಹೊಂದಿದ ನಂತರ ದಾವಾ ಸ್ವತ್ತನ್ನು ಬಿಟ್ಟು ಎಲ್ಲಾ ಆಸ್ತಿಗಳನ್ನು ಮುಟೇಶನ್ ಮಾಡಿಕೊಂಡಿರುತ್ತೇವೆ. ನನ್ನ ತಂದೆ **1993** ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದರಿಂದ ಮುಟೇಶನ್ ಮಾಡಿಕೊಂಡಿರುವುದಿಲ್ಲ. ಉಳಿದ ಆಸ್ತಿಗಳ ಮುಟೇಶನ್ **4-5** ವರ್ಷಗಳ ಕೆಳಗೆ ಮಾಡಿಸಿಕೊಂಡಿರುತ್ತೇವೆ. ದಾವಾ ಸ್ವತ್ತಿನ ಒಟ್ಟಾರೆ ವಿಸ್ತೀರ್ಣದಲ್ಲಿ ನಾವು ಮೂರು ಜನ ವಾದಿಗಳು ಉಳುಮೆ ಮಾಡುತ್ತಿದ್ದೇವೆ. ಅಳತೆ ಮಾಡಿದಾಗ ದಾವಾ ಸ್ವತ್ತು **40** ಸೆಂಟ್ಸ್ ಇರುತ್ತದೆಂದು ತಿಳಿದುಬಂದಿರುತ್ತದೆ. **7-8** ವರ್ಷಗಳ ಕೆಳಗೆ ಅಳತೆ ಮಾಡಿರುತ್ತೇವೆ. ಅಳತೆಯನ್ನು ರಂಟೆ ಹೊಡೆದ ನಂತರ ಅಳತೆ ಮಾಡಿಸಿರುತ್ತೇವೆ. ಹೇಗೆ ರಂಟೆ ಹೊದಿದ್ದಾರೆಂದು ಎಂದು ನಿಖರವಾದ ಮಾಹಿತಿ ಇಲ್ಲ. ದಾವಾ ಸ್ವತ್ತಿನ್ನು ಬಿಟ್ಟು ಉಳಿದ ಆಸ್ತಿಯಲ್ಲಿ ಕೊಳವೆ ಬಾವಿ ಇರುವುದಿಲ್ಲ.

**07.** ದಾವಾ ಸ್ವತ್ತಿನಲ್ಲಿ ಪೂರ್ಣ **40** ಸೆಂಟ್ಸ್ ನಲ್ಲಿ ಕಟ್ಟಡ ಇರುತ್ತದೆ. ದಾವಾ ಸ್ವತ್ತಿಗೆ ಕಾಂಪೌಡ ಇರುತ್ತದೆ. ಸದರಿ ವಿಷಯವನ್ನು ನನ್ನ ನೋಟಿಸಿನಲ್ಲಿ, ವಾದಪತ್ರದಲ್ಲಿ ಮತ್ತು ಪ್ರಮಾಣಪತ್ರದಲ್ಲಿ ಹೇಳಿರುತ್ತೇನೆ. ಸಾಮಾನ್ಯವಾಗಿ ರೈತರು ತೋಟಗಾರಿಕೆ ಮತ್ತು ನೀರಾವರಿ ಬೆಳೆ ಬೆಳೆದರೆ ತೋಟದ ಮನೆ ಕಟ್ಟಿಸಿರುತ್ತಾರೆ ಎಂದರೆ ಸರಿ. ಉಳಿದ ಆಸ್ತಿಯಲ್ಲಿ ಹಡಗಲಿಯಿಂದ ಕೊಯಿಲಾರ ಗಟ್ಟಿ ರಸ್ತೆ ಪಶ್ಚಿಮಕ್ಕೆ ಬರುತ್ತದೆ ಎಂದರೆ ಸರಿ. ಮುಂದುವರೆದು ಸದರಿ ರಸ್ತೆ ಉತ್ತರಕ್ಕೆ ಸೊಯಿನಹಳ್ಳಿ ರಸ್ತೆ ಇದೆ ಎಂದರೆ ಸರಿ. ಉಳಿದ ಆಸ್ತಿಯಲ್ಲಿ ದನದ ಕೊಟ್ಟಿಗೆ ಮತ್ತು ತೋಟದ ಮನೆ ಕಟ್ಟಿರುವುದಿಲ್ಲ ಎಂದರೆ ಸರಿ.

**08.** ಯಾವ ವರ್ಷ ದಾವಾ ಸ್ವತ್ತಿನಲ್ಲಿ ಕಾಂಪೌಡ ಕಟ್ಟಿಸಿರುತ್ತೇನೆ ಎಂದರೆ **1997-98.** ದಾವಾ ಸ್ವತ್ತು ಊರಿಗೆ ಹತ್ತಿಕೊಂಡು ಇದೆ ಎಂದರೆ ಸರಿ. ದಾವಾ ಸ್ವತ್ತು ಹೊಂಬ್ಳಳಿ ಗ್ರಾಮ ಪಂಚಾಯಿತಿಗೆ ಸೇರಿರುತ್ತವೆ ಎಂದರೆ ಸರಿ. ಮನೆ ಕಟ್ಟಲು ಮತ್ತು ಕೆಡವುಲು ಹೊಂಬ್ಳಳಿ ಗ್ರಾಮ ಪಂಚಾಯಿತಿ ಕಡೆಯಿಂದ ಅನುಮತಿ ಪಡೆಯಬೇಕೆಂದರೆ ಕಟ್ಟುವ ಸಮಯದಲ್ಲಿ ಸದರಿ ನಿಯಮ ಇರಲಿಲ್ಲ. ಸದರಿ ದಾವಾ ಸ್ವತ್ತಿನಲ್ಲಿ ದನದ ಕೊಟ್ಟಿಗೆಯನ್ನು **1998-99** ರಲ್ಲಿ ಕಟ್ಟಿರುತ್ತೇವೆ.

**09.** ದಾವಾ ಸ್ವತ್ತು ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ. ದಿಃ**24.08.1999** ರಂದು ನಾವು ಮತ್ತು ನಮ್ಮತಾಯಿ ಸೇರಿಕೊಂಡು ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾವು ಸಮ್ಮತಿಗೆ ಮೇರೆಗೆ ದಾವಾ ಸ್ವತ್ತಿನ ಸ್ವಾಧೀನವನ್ನು ಹಸ್ತಾಂತರಿಸುವಾಗ **3** ನೇ ವ್ಯಕ್ತಿ ಇರಲಿಲ್ಲ. ದಾವಾ ಸ್ವತ್ತನ್ನು ಪ್ರತಿವಾದಿ ಖರೀದಿಸಿದ ನಂತರ ಕಾಂಪೌಂಡ್ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿಸಿದ ನಂತರ ಅದನ್ನು ಅಭಿವೃದ್ದಿಪಡಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಹಾಲಿನ ಡೈರಿ ಕಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿ ದನದಕೊಟ್ಟಿಗೆ ಕಟ್ಟಿದ್ದರೆಂದರೆ ಅದನ್ನು ನಾವು ಕಟ್ಟಿರುತ್ತೇವೆ. ಎರಡು ದನದ ಕೊಟ್ಟಿಗೆ ಇರುವ ಬಗ್ಗೆ ನಾನು ಹೇಳಿರುತ್ತೇನೆ. ದಾವಾ ಸ್ವತ್ತಿನಲ್ಲಿ ಇರುವ ಬೋರ್ ವೆಲ್ ನ್ನು ನಾವು ಹಾಕಿಸಿರುತ್ತೇವೆ.ಯಾವ ವರ್ಷದಲ್ಲಿ ಹಾಕಿಸಿರುತ್ತೇನೆ ಎಂದರೆ ನನಗೆ ಹೇಳಲು ಬರುವುದಿಲ್ಲ. ಬೋರ್ ವೆಲ್ ಬಗ್ಗೆ ವಾದ ಪತ್ರದಲ್ಲಿ ಹೇಳಿರುತ್ತೇನೆ. ದಾವಾ ಸ್ವತ್ತಿನಲ್ಲಿರುವ ಗಿಡ-ಮರಗಳನ್ನು ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿಸಿದ ನಂತರ ಹಾಕಿ ಬೆಳಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಶೌಚಾಲಯ ಇದೆ ಎಂದರೆ ಸರಿ. ದಾವಾ ಸ್ವತ್ತಿನ್ನು ಖರೀದಿಸಿದ ಪ್ರತಿವಾದಿ ಅದನ್ನು ಅಭಿವೃದ್ಧಿಪಡಿಸಿದ್ದಾರೆ ಎಂದರೆ ಸರಿಯಲ್ಲ.

**10.** ಪ್ರತಿವಾದಿ ಕೊಂಬ್ಳಳಿ ಗ್ರಾಮ ಪಂಚಾಯಿತಿಯಿಂದ ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟುವುದಕ್ಕಾಗಿ ಅನುಮತಿ ಪಡದಿದ್ದಾರೆ ಎಂದರೆ ಅದನ್ನು ಸೃಷ್ಟಿಸಿರುತ್ತಾರೆ.

ದಾವಾ ಸ್ವತ್ತಿನ್ನು ಖರೀದಿಸಿದ ನಂತರ ಪ್ರತಿವಾದಿ ಅಲ್ಲಿ ಮನೆ ಕಟ್ಟಿ ಪಂಚಾಯಿತಿಯಿಂದ ಡೊರ್ ನಂಬರ ಪಡೆದಿರುತ್ತಾರೆ ಎಂದರೆ ಅದನ್ನು ಸೃಷಿ ಮಾಡಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಅವಕಾಶ ಕೊಡಲಾಯಿತು.

((ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

"ನನ್ನ ಸಮಕ್ಷಮ"

ಓ. ಹೇ. ಕೇ. ಸರಿ ಇದೆ

(ಶ್ರೀ.ವೀರೇಶ್ ಕುಮಾರ್.ಸಿ.ಕೆ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.